# ವಿಶ್ವವನ್ನು ಪೊರೆಯುವ ಸ್ತ್ರೀಕಾರುಣ್ಯ ಸಮಾಜಕ್ಕೆ ಮಾರಕ ಗಂಡಿನ ಕಾಠಿಣ್ಯ

ಕೌಟುಂಬಿಕ ಚೌಕಟ್ಟಿನಲ್ಲಿ ಲಿಂಗಭೇದವನ್ನು ನಿವಾರಿಸುವುದು ಸಾಧ್ಯವಾದರೆ, ಆ ಸಮಾನತೆ ಸಮಾಜದಲ್ಲಿ ಕಾಣಿಸಿಕೊಳ್ಳಲು ಹೆಚ್ಚಿನ ಸಮಯವೇನೂ ಬೇಕಾಗುವುದಿಲ್ಲ. ಸಮಾನತೆಯ ಸಾಧನೆಯೊಂದಿಗೆ ಹೆಣ್ಣಿನ ದೈಹಿಕ ದೌರ್ಬಲ್ಯ ಹಾಗೂ ಶೀಲದ ಪಾವಿತ್ರ್ಯದ ಬಗೆಗೆ ಸಮಾಜದಲ್ಲಿರುವ ಹುಸಿ ನಂಬಿಕೆಗಳೂ ಇಲ್ಲವಾಗುತ್ತವೆ.

ಹೆಣ್ಣಿನ ಕಾಳಜಿಗೆ ಸಂಬಂಧಿಸಿದಂತೆ ಸಮಾಜದಲ್ಲಿನ ಮಾತುಗಳು ಬಹುತೇಕ ಸಂದರ್ಭದಲ್ಲಿ ನೈತಿಕತೆಗೆ ಸೀಮಿತವಾಗಿರುತ್ತವೆ. ಹೆಣ್ಣು ಶಾರೀರಿಕವಾಗಿ ದುರ್ಬಲವೆಂದು ಭಾವಿಸಿರುವ ಸಮಾಜ, ಅವಳ ರಕ್ಷಣೆಗೆಂದು ಅನೇಕ ಕಟ್ಟುಪಾಡುಗಳನ್ನು ರೂಪಿಸಿಕೊಂಡಿದೆ. ಹೆಣ್ಣಿನ ಶೀಲಕ್ಕೆ ಪಾವಿತ್ರ್ಯವನ್ನು ಆರೋಪಿಸಿದೆ. ಇವೆಲ್ಲ ಕಟ್ಟುಪಾಡುಗಳು ಹಾಗೂ ಆರೋಪಿತ ಪಾವಿತ್ರ್ಯದ ಸಂಕಥನಗಳ ಸಾರಾಂಶ ಇಷ್ಟೇ: ಹೆಣ್ಣು ತನ್ನನ್ನು ತಾನು ರಕ್ಷಿಸಿಕೊಳ್ಳಲು ಅಸಮರ್ಥಳು ಹಾಗೂ ಅವಳನ್ನು ಕಾಪಾಡುವುದು ಗಂಡಿನ ಹೊಣೆಗಾರಿಕೆ. ಇಂಥ ನಂಬಿಕೆಗಳ ಹಿಂದಿರುವುದು ‘ಪುರುಷ ಅಹಂ’ ಎನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ.

ಸಮಾಜದ ನಡವಳಿಕೆಗಳಲ್ಲಿ ಪುರುಷ ಯಜಮಾನಿಕೆ ಎಷ್ಟರಮಟ್ಟಿಗೆ ಮಿಳಿತವಾಗಿದೆ ಎನ್ನುವುದಕ್ಕೆ ಉದಾಹರಣೆಯಾಗಿ, ಇತ್ತೀಚೆಗೆ ‘ಪೊಗರು’ ಚಿತ್ರಕ್ಕೆ ಸಂಬಂಧಿಸಿದಂತೆ ಉಂಟಾದ ವಿವಾದವನ್ನು ಗಮನಿಸಬಹುದು. ಸಮುದಾಯವೊಂದಕ್ಕೆ ಅವಮಾನವಾಗಿದೆ ಎನ್ನುವ ಕಾರಣಕ್ಕಾಗಿ ಚಿತ್ರತಂಡದ ವಿರುದ್ಧ ಪ್ರತಿಭಟನೆ ನಡೆಯಿತು. ಆ ವಿರೋಧದ ಕೇಂದ್ರದಲ್ಲಿ ಜಾತಿಪ್ರಜ್ಞೆ, ಇತ್ತೆನ್ನುವ ಟೀಕೆ ಟಿಪ್ಪಣಿಗಳೂ ವ್ಯಕ್ತವಾದವು. ಈ ಜಾತಿಕೇಂದ್ರಿತ ಚರ್ಚೆಗಳ ಕಾವಿನಲ್ಲಿ, ಆ ಸಿನಿಮಾ ಹೆಣ್ಣಿನ ಬಗ್ಗೆ ಹೊಂದಿರುವ ಹಗುರ ಧೋರಣೆಯ ಬಗ್ಗೆ ಗಟ್ಟಿಧ್ವನಿಯಲ್ಲಿ ಚರ್ಚೆಯೇ ನಡೆಯಲಿಲ್ಲ. ಜಾತಿಗೆ ಅವಮಾನ ಎನ್ನಿಸಿದರೆ ಜನ ಸಿಟ್ಟಿಗೇಳುತ್ತಾರೆ. ಆದರೆ, ಹೆಣ್ಣಿನ ಅವಮಾನ ಯಾರಿಗೂ ಗಂಭೀರವಾದ ವಿಷಯವೆನ್ನಿಸುವುದಿಲ್ಲ. ಇದು ಪೊಗರು ಚಿತ್ರಕ್ಕೆ ಸೀಮಿತವಾದ ಮಾತಲ್ಲ. ಬಹುತೇಕ ವ್ಯಾಪಾರಿ ಚಿತ್ರಗಳಲ್ಲಿ ಹೆಣ್ಣು ಮನರಂಜನೆಯ ಒಂದು ಕಲರ್‌ಫುಲ್ ಸರಕಷ್ಟೇ. ನಾಯಕನ ಪುರುಷತ್ವದ ಪೊಗರಿನ ಪೋಷಣೆ ಮತ್ತು ವೈಭವೀಕರಣಕ್ಕೆ ನಾಯಕಿ ಒಂದು ಐಟಮ್ಮೇ ಹೊರತು, ಆಕೆಯ ವ್ಯಕ್ತಿತ್ವಕ್ಕೆ ಇರಬಹುದಾದ ಹಲವು ಆಯಾಮಗಳ ಅನಾವರಣ ಸಿನಿಮಾಕ್ಕೆ ಮುಖ್ಯವಲ್ಲ. ನಾಯಕಿಗೆ ಇಷ್ಟವಿರಲಿ ಇಲ್ಲದಿರಲಿ, ಅವಳು ನಾಯಕನನ್ನು ಪ್ರೀತಿಸಲೇಬೇಕು. ಗಂಡು ಒರಟಾಗಿ ವರ್ತಿಸುವುದನ್ನು ಪ್ರೇಮವೆಂದು ಬಣ್ಣಿಸುವ ದೃಶ್ಯಮಾಧ್ಯಮ, ಹೆಣ್ಣಿನ ಒರಟುತನವನ್ನು ಗಯ್ಯಾಳಿತನವೆಂದು, ಅಹಂಕಾರವೆಂದು ಚಿತ್ರಿಸುತ್ತದೆ. ದುರದೃಷ್ಟವಶಾತ್, ಸಿನಿಮಾ ಮಾಧ್ಯಮದ ಈ ಧೋರಣೆ ಸಮಾಜದಲ್ಲೂ ಕಾಣಿಸಿಕೊಳ್ಳುತ್ತಿದೆ.

ಸಂವಾದ, ಸಂಘರ್ಷದ ಸಂದರ್ಭಗಳಲ್ಲಿ ಹೆಣ್ಣು ಸುಲಭವಾಗಿ ದೊರೆಯುವ ಮಿಕ. ಕೌರವರು ದ್ರೌಪದಿಯನ್ನು ಸಭಾಂಗಣಕ್ಕೆ ಎಳೆತಂದ ಮಹಾಭಾರತದ ಪ್ರಸಂಗವನ್ನು ನಮ್ಮ ಸಮಾಜ ಆದರ್ಶವಾಗಿ ಪರಿಗಣಿಸಿದೆ ಎನ್ನುವಂತೆ, ಗಂಡಸರ ನಡುವಿನ ಜಗಳ ಗುದ್ದಾಟಗಳಲ್ಲಿ ಹೆಣ್ಣನ್ನು ಎಳೆತರಲಾಗುತ್ತದೆ. ಹೆಣ್ಣನ್ನು ಹೀಗಳೆವ ಮೂಲಕ ಗಂಡಿನ ಮೃಗತ್ವ ಜಾಗೃತಗೊಳ್ಳುತ್ತಿದೆ. ಗಂಡು ಮೃಗದ ರೂಪದಲ್ಲಿ ಅಭಿವ್ಯಕ್ತಗೊಂಡಾಗಲೆಲ್ಲ, ಮನುಷ್ಯಜಾತಿ ಎಂದರೆ ಹೆಣ್ಣು ಮಾತ್ರ ಎಂದು ಯಾರಿಗಾದರೂ ಅನ್ನಿಸಿದರೆ ಅದು ಅಸಹಜವೇನಲ್ಲ.

ಉದಾತ್ತತೆಯನ್ನು ಆರೋಪಿಸಿಕೊಂಡಿರುವ ಸಾಹಿತ್ಯವಲಯ ಕೂಡ ಹೆಣ್ಣಿನ ಬಗೆಗಿನ ಪೂರ್ವಗ್ರಹಗಳಿಂದ ಮುಕ್ತಾಯವಾಗಿಲ್ಲ. ಜನಸಾಮಾನ್ಯರ ಮಾತಿರಲಿ, ಅನೇಕ ಬರಹಗಾರರ ಪಾಲಿಗೂ ಸ್ತ್ರೀವಾದ ವಿನೋದದ ಸಂಗತಿ. ವಾಸ್ತವವಾಗಿ ಅದು ಮಾನವತಾವಾದವಲ್ಲದೆ ಬೇರೇನಲ್ಲ. ತನ್ನನ್ನು ತಾನು ಮಾನವತಾವಾದಿ ಎಂದು ನಂಬುವ ಪ್ರತಿ ವ್ಯಕ್ತಿಯೂ ಸ್ತ್ರೀವಾದಿಯೇ ಆಗಿರುತ್ತಾನೆ. ಹೆಣ್ಣಿನ ಕಣ್ಣೋಟದಲ್ಲಿ ಸಮಾಜವನ್ನು ಕಟ್ಟುವುದೆಂದರೆ, ಅದು ಸಮಾಜವನ್ನು ಮಾನವೀಯಗೊಳಿಸುವ ಪ್ರಕ್ರಿಯೆಯೇ ಆಗಿದೆ.

ಲಿಂಗ ತಾರತಮ್ಯದ ಮಾತುಗಳು ಬಹುತೇಕ ಸಂದರ್ಭಗಳಲ್ಲಿ ಪುನರಾವರ್ತನೆ ಎನ್ನಿಸಿದರೂ, ಆ ವಿಚಾರಗಳನ್ನು ಮತ್ತೆ ಮತ್ತೆ ಹೇಳುವುದು ಅನಿವಾರ್ಯವಾಗಿದೆ. ಹೆಣ್ಣಿನ ಬಗೆಗಿನ ಪೂರ್ವಗ್ರಹಗಳು ಗಂಡಿನಲ್ಲಿ ಮಾತ್ರವಲ್ಲ, ಸ್ವತಃ ಹೆಣ್ಣಿನೊಳಗೂ ಇವೆ. ಈ ಗ್ರಹಿಕೆಗಳನ್ನು ನಿವಾರಿಸುವುದು ಶಾಲೆಯೊಳಗೂ ಮನೆಯೊಳಗೂ ಸಮಾಜದೊಳಗೂ ನಿರಂತರವಾಗಿ ನಡೆಯುತ್ತಿರಬೇಕು. ‘ಮಹಿಳಾದಿನ’ ಎನ್ನುವುದು ವರ್ಷದ ಒಂದು ದಿನಕ್ಕೆ ಸೀಮಿತವಾಗದೆ ಅನುದಿನದ ಆಚರಣೆಯಾಗಬೇಕು. ಹೆಣ್ಣಿನ ಭಾವನೆಗಳನ್ನು ಗೌರವಿಸುವ, ಪ್ರತಿಭೆಯನ್ನು ಗುರ್ತಿಸುವ, ವ್ಯಕ್ತಿತ್ವದಲ್ಲಿನ ಸೌಂದರ್ಯವನ್ನು ಗುರ್ತಿಸುವ ಮನೋಭಾವವನ್ನು ಪ್ರಜ್ಞಾಪೂರ್ವಕವಾಗಿ ರೂಢಿಸಿಕೊಳ್ಳಬೇಕು. ಯಾವ ರೀತಿಯಲ್ಲೂ ಗಂಡಿಗಿಂತಲೂ ಹೆಣ್ಣು ಕಡಿಮೆಯಲ್ಲ ಎನ್ನುವ ಸಮಾನಭಾವ ನಮ್ಮಲ್ಲಿ, ವಿಶೇಷವಾಗಿ ಮಕ್ಕಳಲ್ಲಿ ಮೂಡಬೇಕು. ಕೆಲವು ಕೆಲಸಗಳು ಹೆಣ್ಣುಮಕ್ಕಳಿಗಷ್ಟೇ ಸೀಮಿತ ಎನ್ನುವ ಮನೋಭಾವ ಬದಲಾಗಬೇಕು. ಕೌಟುಂಬಿಕ ಚೌಕಟ್ಟಿನಲ್ಲಿ ಲಿಂಗಭೇದವನ್ನು ನಿವಾರಿಸುವುದು ಸಾಧ್ಯವಾದರೆ, ಆ ಸಮಾನತೆ ಸಮಾಜದಲ್ಲಿ ಕಾಣಿಸಿಕೊಳ್ಳಲು ಹೆಚ್ಚಿನ ಸಮಯವೇನೂ ಬೇಕಾಗುವುದಿಲ್ಲ. ಸಮಾನತೆಯ ಸಾಧನೆಯೊಂದಿಗೆ ಹೆಣ್ಣಿನ ದೈಹಿಕ ದೌರ್ಬಲ್ಯ ಹಾಗೂ ಶೀಲದ ಪಾವಿತ್ರ್ಯದ ಬಗೆಗೆ ಸಮಾಜದಲ್ಲಿರುವ ಹುಸಿ ನಂಬಿಕೆಗಳೂ ಇಲ್ಲವಾಗುತ್ತವೆ. ಪ್ರಸ್ತುತ ನಾವು ಕಾಳಜಿ ವಹಿಸಬೇಕಾದುದು ಸಮಾಜದ ಶೀಲದ ಬಗ್ಗೆ. ಸಮಾಜದ ಶೀಲದ ರಕ್ಷಣೆಯಲ್ಲೇ ಸಮಸ್ತ ವಿಶ್ವದ ಹಿತವೂ ಅಡಗಿದೆ.

■ ರಘುನಾಥ ಚ.ಹ.



ಈಶ್ವರ್